# ನಿಮ್ಮೊಡನೆ

## ಕಣ್ಣು ತೆರೆಸಿದ ಕ್ರೀಡಾಕೂಟ

**ಬೆಂಗಳೂರಿನಲ್ಲಿ ಕ್ರೀಡಾಕೂಟವನ್ನು ಏರ್ಪಡಿಸುವ ಮೂಲಕ ಭಾರತೀಯ ಪ್ಯಾರಾ ಒಲಿಂಪಿಕ್ ಸಂಸ್ಥೆ ಒಳ್ಳೆಯ ಕೆಲಸವನ್ನೇ ಮಾಡಿದೆ. ಭಾರತೀಯ ಅಂಗವಿಕಲ ಕ್ರೀಡಾಪಟುಗಳ ಸ್ಪರ್ಧಾ ಸಾಮರ್ಥ್ಯ ಹೆಚ್ಚಿಸುವಲ್ಲಿ ಈ ಕೂಟ ಸ್ಫೂರ್ತಿ ತುಂಬುವುದು ಖಚಿತ. ಆದರೆ ಕ್ರೀಡಾಕೂಟದ ಸಂಘಟನೆಯಲ್ಲಿ ಎದ್ದು ಕಾಣಿಸಿದ ಹಲವು ಲೋಪದೋಷಗಳು ಕೂಟಕ್ಕೆ ಕಪ್ಪು ಚುಕ್ಕೆ ಇಟ್ಟವು. ಕ್ರೀಡಾಕೂಟ ಸಂಘಟಿಸುವಲ್ಲಿ ನಮ್ಮ ಪೂರ್ವಸಿದ್ಧತೆ, ಇಚ್ಛಾಶಕ್ತಿ ಏನೇನೂ ಸಾಲದು ಎನ್ನುವುದು ಮತ್ತೆ ಮತ್ತೆ ನಿಚ್ಚಳವಾಯಿತು.**

‘ಮನದಲ್ಲಿ ಮಾತ್ರ ಅಡೆತಡೆ ಎಂಬುದು ಇರುತ್ತದೆ. ನಾವು ಸಕಾರಾತ್ಮಕವಾಗಿ ಯೋಚಿಸಬೇಕು. ಆಗ ನಾವು ಅಂದುಕೊಂಡಂತೆ ಎಲ್ಲವೂ ನಡೆಯುತ್ತದೆ. ಕೈ ಇಲ್ಲ ಎಂದು ಕುಳಿತಿದ್ದರೆ ನನಗೆ ಇಲ್ಲಿ ಚಿನ್ನದ ಪದಕ ಸಿಗುತ್ತಿರಲಿಲ್ಲ..’

–ಇದು ಎರಡೂ ಕೈಗಳಿಲ್ಲದ ದಕ್ಷಿಣ ಆಫ್ರಿಕಾದ ಸಮ್ಮೆಲೊ ರಾಬೆಡೆ ಎಂಬ ಕ್ರೀಡಾಪಟು 100 ಮೀಟರ್ ಓಟವನ್ನು 11.56 ಸೆಕೆಂಡುಗಳಲ್ಲಿ ಓಡಿ ಚಿನ್ನದ ಪದಕ ಗೆದ್ದ ಬಳಿಕ ಹೇಳಿದ ಮಾತು. ಬೆಂಗಳೂರಿನಲ್ಲಿ ಮೊನ್ನೆಯಷ್ಟೇ ಮುಗಿದ ವಿಶ್ವ ಅಂಗವಿಕಲರ ಕ್ರೀಡಾಕೂಟದಲ್ಲಿ ಈತ ‘ಅತ್ಯಂತ ವೇಗದ ಓಟಗಾರ’ ಎನ್ನಿಸಿದ! ಈತನಂತೆಯೇ ಎರಡೂ ಕಾಲುಗಳಿಲ್ಲದ, ಕೃತಕ ಕಾಲುಗಳನ್ನು ಜೋಡಿಸಿಕೊಂಡ ಜರ್ಮನಿಯ ಉನೆಸ್ನಾ ಲೋವ್ ಎಂಬಾಕೆಯೂ ಲಾಂಗ್‌ಜಂಪ್‌ನಲ್ಲಿ 3.92 ಮೀಟರ್ ದೂರ ಜಿಗಿದು ವಿಶ್ವ ದಾಖಲೆಯೊಂದಿಗೆ ಸ್ವರ್ಣ ಗೆದ್ದಳು. ಇವರಿಬ್ಬರೇ ಅಲ್ಲ, ಒಟ್ಟು 37 ದೇಶಗಳಿಂದ ಬೆಂಗಳೂರಿಗೆ ಬಂದಿದ್ದ 604 ಅಂಗವಿಕಲ ಕ್ರೀಡಾಪಟುಗಳು ಕೂಟದಲ್ಲಿ ತೋರಿದ ಧೈರ್ಯ ಮತ್ತು ಪ್ರದರ್ಶನ, ಎಲ್ಲ ಅಂಗಾಂಗಳು ಸರಿಯಾಗಿಯೇ ಇರುವವರೂ ಅಚ್ಚರಿ ಪಡುವಂತಹದ್ದು.

ಇದು ವಿಶ್ವ ಮಟ್ಟದಲ್ಲಿ ನಡೆಯುತ್ತಿರುವ ಮೂರನೇ ‘ಐವಾಸ್’ ವಿಶ್ವ ಅಂಗವಿಕಲರ ಕ್ರೀಡಾಕೂಟ. ಭಾರತದ 163 ಕ್ರೀಡಾಪಟುಗಳೂ ಈ ಕೂಟದಲ್ಲಿ ಭಾಗವಹಿಸಿದ್ದರು. ಹೆಚ್ಚು ಕ್ರೀಡಾಳುಗಳು ಭಾಗವಹಿಸಿದ್ದರೂ, ಪದಕ ಗೆಲ್ಲುವಲ್ಲಿ ನಮ್ಮವರ ಸಾಧನೆ ಅಷ್ಟಕ್ಕಷ್ಟೆ. ಆದರೆ ವಿದೇಶೀ ಕ್ರೀಡಾಳುಗಳು ಬಹುತೇಕ ಪದಕಗಳನ್ನು ಗೆದ್ದುಕೊಂಡರು. ಇದಕ್ಕೂ ಕಾರಣವಿದೆ. ಭಾರತೀಯ ಸಮಾಜದಲ್ಲಿ ಇವತ್ತಿಗೂ ಅಂಗವೈಕಲ್ಯ ಇರುವವರನ್ನು ಕಡೆಗಣ್ಣಲ್ಲೇ ನೋಡಲಾಗುತ್ತಿದೆ. ಅವರ ಕ್ರೀಡಾಕ್ಷಮತೆ ಬಿಡಿ, ಕನಿಷ್ಠಪಕ್ಷ ದುಡಿಯುವ ಕ್ಷಮತೆಯನ್ನು ಹೆಚ್ಚಿಸುವ ಮೂಲಸೌಲಭ್ಯಗಳನ್ನು ಒದಗಿಸುವಲ್ಲಿಯೂ ನಾವು ಬಹಳಷ್ಟು ಹಿಂದಿದ್ದೇವೆ. ಬೆಂಗಳೂರಿನ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಜರ್ಮನಿಯ ಉನೆಸ್ನಾಗೆ 17 ಲಕ್ಷ ರೂಪಾಯಿ ವೆಚ್ಚದ ಕೃತಕ ಕಾಲುಗಳನ್ನು ಜೋಡಿಸಲಾಗಿತ್ತು. ಈ ಕೃತಕ ಕಾಲುಗಳನ್ನು ಅಲ್ಲಿನ ಖಾಸಗಿ ಕಂಪೆನಿಯೊಂದು ನೀಡಿ, ಆಕೆಯ ಸ್ಪರ್ಧೆಗೆ ಪ್ರೋತ್ಸಾಹ ನೀಡಿತ್ತು. ಜಪಾನ್, ಚೀನಾದಿಂದ ಬಂದ ಬಹುತೇಕ ಸ್ಪರ್ಧಿಗಳಿಗೆ ಅಲ್ಲಿನ ಕಂಪೆನಿಗಳು ತಮ್ಮಿಂದಾಗುವ ಎಲ್ಲ ಸಹಾಯಗಳನ್ನೂ ನೀಡಿ ಪ್ರೋತ್ಸಾಹಿಸಿದ್ದು ಎದ್ದು ಕಾಣುತ್ತಿತ್ತು. ಕೆಲವು ವಿದೇಶೀ ಅಂಗವಿಕಲ ಕ್ರೀಡಾಪಟುಗಳು ವ್ಹೀಲ್‌ಚೇರ್‌ನಲ್ಲೇ ಕುಳಿತು ಓಟ, ಡಿಸ್ಕಸ್, ಶಾಟ್‌ಪಟ್ ಪ್ರದರ್ಶನಗಳಲ್ಲಿ ಅತ್ಯುತ್ತಮ ಸಾಧನೆ ಮೆರೆದರು. ಸುಮಾರು 7 ಲಕ್ಷ ರೂಪಾಯಿ ವೆಚ್ಚದ ಈ ವ್ಹೀಲ್‌ಚೇರ್‌ಗಳನ್ನು ಅಲ್ಲಿನ ಕಂಪೆನಿಗಳೇ ಕೊಡುಗೆಯಾಗಿ ನೀಡಿದ್ದವು. ಅನೇಕ ಭಾರತೀಯ ಕಂಪೆನಿಗಳು ವಿದೇಶೀ ಕಂಪೆನಿಗಳಿಗಿಂತ ಹೆಚ್ಚಿನ ಲಾಭ ಗಳಿಸುತ್ತಿದ್ದರೂ, ಈ ರೀತಿ ಅಂಗವಿಕಲ ಕ್ರೀಡಾಪಟುಗಳಿಗೆ ನೆರವು ನೀಡಿದ ಉದಾಹರಣೆಗಳು ಕೈಬೆರಳೆಣಿಕೆಯಷ್ಟು ಎನ್ನುವುದು ಕ್ರೀಡಾಕೂಟದಲ್ಲಿ ಎದ್ದು ಕಾಣುತ್ತಿದ್ದ ಅಂಶ.

ಬೆಂಗಳೂರಿನಲ್ಲಿ ಈ ಕ್ರೀಡಾಕೂಟವನ್ನು ಏರ್ಪಡಿಸುವ ಮೂಲಕ ಭಾರತೀಯ ಪ್ಯಾರಾ ಒಲಿಂಪಿಕ್ ಸಂಸ್ಥೆ ಒಳ್ಳೆಯ ಕೆಲಸವನ್ನೇ ಮಾಡಿದೆ. ಭಾರತೀಯ ಅಂಗವಿಕಲ ಕ್ರೀಡಾಪಟುಗಳ ಸ್ಪರ್ಧಾ ಸಾಮರ್ಥ್ಯ ಹೆಚ್ಚಿಸುವಲ್ಲಿ ಈ ಕೂಟ ಸ್ಫೂರ್ತಿ ತುಂಬುವುದು ಖಚಿತ. ಆದರೆ ಕ್ರೀಡಾಕೂಟದ ಸಂಘಟನೆಯಲ್ಲಿ ಎದ್ದು ಕಾಣಿಸಿದ ಹಲವು ಲೋಪದೋಷಗಳು ಕೂಟಕ್ಕೆ ಕಪ್ಪು ಚುಕ್ಕೆ ಇಟ್ಟವು. ಕ್ರೀಡಾಕೂಟ ಸಂಘಟಿಸುವಲ್ಲಿ ನಮ್ಮ ಪೂರ್ವಸಿದ್ಧತೆ, ಇಚ್ಛಾಶಕ್ತಿ ಏನೇನೂ ಸಾಲದು ಎನ್ನುವುದು ಮತ್ತೆ ಮತ್ತೆ ನಿಚ್ಚಳವಾಯಿತು. ದೂರದ ಜೆಕ್ ಗಣರಾಜ್ಯದಿಂದ ಎರಡು ದಿನ ಮೊದಲೇ ಬೆಂಗಳೂರಿಗೆ ಬಂದು, ಹೋಟೆಲ್‌ನಲ್ಲಿ ಉಳಿದುಕೊಂಡಿದ್ದ ಕ್ರೀಡಾಳುಗಳಿಗೆ ಕಂಠೀರವ ಕ್ರೀಡಾಂಗಣ ಎಲ್ಲಿದೆ ಎನ್ನುವುದೂ ಗೊತ್ತಿರಲಿಲ್ಲ. ಇವರ ಸಹಿತ ಹಲವರನ್ನು ಕ್ರೀಡಾಂಗಣಕ್ಕೆ ಕರೆತರುವ ಸಾರಿಗೆ ವ್ಯವಸ್ಥೆಯೂ ಇರಲಿಲ್ಲ. ಕ್ರೀಡಾಂಗಣದ ಒಳಗೆ ಶೌಚಾಲಯ ವ್ಯವಸ್ಥೆ ಅತ್ಯಂತ ಹದಗೆಟ್ಟಿದ್ದು, ಕಸ ಹಾಕಲು ಕಸದ ಬುಟ್ಟಿ ಕಾಣದೆ ವಿದೇಶೀ ಕ್ರೀಡಾಪಟುಗಳು ಹುಡುಕಾಡುತ್ತಿದ್ದುದು, ಊಟ– ತಿಂಡಿಯ ಸಮರ್ಪಕ ವ್ಯವಸ್ಥೆ ಇಲ್ಲದಿದ್ದುದು– ಎಲ್ಲವೂ ಸಂಘಟಕರ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿ ಮಾತ್ರವಲ್ಲ; ವಿದೇಶೀಯರ ಮುಂದೆ ನಮ್ಮ ಮಾನ ಕಳೆದ ಅಂಶಗಳು ಕೂಡಾ. ಇವೆಲ್ಲವನ್ನೂ ವ್ಯವಸ್ಥಿತವಾಗಿ ಮಾಡುವುದಕ್ಕೆ ಹಣದ ಕೊರತೆ ಇದ್ದಿರಲಿಲ್ಲ ಎನ್ನುವುದು ಗಮನಿಸಬೇಕಾದ ಸಂಗತಿ. ಸಂಘಟಕರ ಬಳಿ 19 ಕೋಟಿ ರೂಪಾಯಿಗೂ ಹೆಚ್ಚು ಹಣ ಒಟ್ಟು ಸೇರಿತ್ತು. ಕೂಟದಲ್ಲಿ ಭಾಗವಹಿಸಿದ ಪ್ರತಿ ವಿದೇಶೀ ಕ್ರೀಡಾಳುಗಳೂ 650 ಪೌಂಡ್ ನೀಡಿಯೇ ಬಂದಿದ್ದರು. ಆದರೆ ಕ್ರೀಡಾಪಟುಗಳಿಗೆ ಕನಿಷ್ಠ ಮೂಲಸೌಲಭ್ಯಗಳನ್ನು ಒದಗಿಸಲೂ ಸಂಘಟಕರಿಗೆ ಸಾಧ್ಯವಾಗಲಿಲ್ಲ ಎನ್ನುವುದು ನಾಚಿಕೆಗೇಡಿನ ಸಂಗತಿ.

ಇಷ್ಟೆಲ್ಲದರ ಮಧ್ಯೆಯೂ ಚಿನ್ನದ ಪದಕ ಗೆದ್ದ ರಾಬೆಡೆ ಹೇಳಿದ ಮಾತುಗಳು ನಮಗೆ ಮಾರ್ಗದರ್ಶನವಾಗಬೇಕು. ಈ ಸಲದ ವೈಫಲ್ಯ ನಮ್ಮ ಮುಂದಿನ ಯೋಜನೆಗಳ ಯಶಸ್ಸಿಗೆ ಪಾಠವಾಗಬೇಕು. ಆದೀತೆ?






■ ಬಿ.ಎಂ. ಹನೀಫ್